ಅಧ್ಯಕ್ಷರು: ಯೋಗೀಶ್, ನಿಮ್ಮದು ನೋಟೀಸ್ ಇಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಮೊನ್ನೆ ನಾವೆಲ್ಲಾ ಕೊಟ್ಟಿದ್ದಕ್ಕೆ ಶೂನ್ಯವೇಳೆ ಆದರೆ ಆದ್ಯತೆಯಲ್ಲಿ ಪರಿಗಣನೆ ಮಾಡುತ್ತೇವೆ ಎಂದು ಹೇಳಿದ್ದೀರಿ.

ಅಧ್ಯಕ್ಷರು: ನನ್ನ ಮುಂದೆ ಲಿಸ್ಟೇ ಇಲ್ಲ. ಅದೆಲ್ಲ ಲ್ಯಾಪ್ಸ್ ಆಗಿದೆ. ನಿಮ್ಮದೆಲ್ಲ ನಾಳೆ ತೆಗೆದುಕೊಳ್ಳುತ್ತೇನೆ. ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಜಯರಾಮಶೆಟ್ಟಿ: ಅಧ್ಯಕ್ಷರೇ...

ಅಧ್ಯಕ್ಷರು: ಜಯರಾಮಶೆಟ್ಟರೇ, ನಿಮ್ಮದು ಹೆಸರು ಕರೆದಾಗ ನೀವು ಇರಲಿಲ್ಲ. ಆದ್ದರಿಂದ ಲ್ಯಾಪ್ಸ್ ಆಯಿತು. ಇವತ್ತು ಗೊತ್ತಾದರೆ ಪ್ರತಿದಿವಸ ಲೇಟ್ ಆಗಿ ಬರುವುದಿಲ್ಲ. ಬೆಲ್ ಆದ ತಕ್ಷಣ ಬರುತ್ತೀರಿ. ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ....

ಅಧ್ಯಕ್ಷರು: ಒಂದು ನಿಮಿಷ. ಯೋಗೀಶ್‌ಭಟ್ ಅವರು ಪ್ರಸ್ತಾಪ ಮಾಡುತ್ತಾರೆ.

ಐ) ದ.ಕ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ : ಪಂಗಡದವರ ವಿದ್ಯಾರ್ಥಿನಿಲಯಗಳಲ್ಲಿ ಇರತಕ್ಕ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಬಿಡುಗಡೆ ಬಗ್ಗೆ.

ಶ್ರೀ ಎನ್.ಯೋಗೀಶ್‌ಭಟ್ (ಮಂಗಳೂರು): ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸುಮಾರು 4,598 ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ 1997-98ನೇ ಸಾಲಿನಲ್ಲಿ ಕೊಡಬೇಕಾದ ಶಿಷ್ಯವೇತನ ಅಂದರೆ ವರ್ಷಕ್ಕೆ ಕನಿಷ್ಟ ಐದುನೂರು ರೂಪಾಯಿ ಲೆಕ್ಕದಲ್ಲಿ 22.99 ಲಕ್ಷ ರೂ.ಗಳು ಬಾಕಿ ಇದೆ. ಇದು ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದಿದ್ದು 23.2.98ರಲ್ಲಿ. ಆದೇಶದ ಮುಖಾಂತರ ಈ ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಲಾಗಿತ್ತು. ಈ ಮೊತ್ತಕ್ಕೆ ಜಿಲ್ಲಾ ಪಂಚಾಯತ್‌ನವರು ಕಳುಹಿಸಿದ ಪೈಡ್ ರಸೀತಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಮೇಲು ಸಹಿ ಮಾಡಿ 7.3.98ರಂದು ಹಿಂದಿರುಗಿಸಿದ್ದಾರೆ. ದಿನಾಂಕ 16.3.98ರಂದು ಸದರಿ ಬಿಲ್ಲನ್ನು ಜಿಲ್ಲಾ ಖಜಾನೆ, ಮಂಗಳೂರಿಗೆ ಸಲ್ಲಿಸಲಾಗಿತ್ತು. ಸದರಿ ಮೊತ್ತಕ್ಕೆ ಚೆಕ್ಕನ್ನು ನಿರೀಕ್ಷಿಸಲಾಗಿದೆ. ಖಜಾನೆಯಿಂದ ಚೆಕ್ ಬಂದು ಮುಟ್ಟಿಲ್ಲ. ಹಣವನ್ನು ಸಂಬಂಧಿಸಿದ ಪ್ರೌಢಶಾಲೆಗಳಿಗೆ - ಅಲ್ಲಿಯ ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ವಿತರಿಸಲಾಗುವುದು ಎಂದು ಹೇಳಿದೆ. ಬಿಲ್ ಟ್ರೆಜರಿಗೆ ಬಂದು ಸುಮಾರು 40 ದಿವಸ ಆಯಿತು. ಇವತ್ತೂ ಕೂಡ ಹಣ ರಿಲೀಸ್ ಆಗಿಲ್ಲ. ಮೊನ್ನೆ ಅಂಬೇಡ್ಕರ ಜಯಂತಿ ದಿವಸ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಾಕಷ್ಟು ಸಂಖ್ಯೆಯಲ್ಲಿ

ಅಲ್ಲಿ ಬಂದು ತಮ್ಮ ನೋವನ್ನು ಹೇಳಿದರು. ಏಕೆ 40 ದಿವಸಗಳಿಂದ ಇದು ಪೆಂಡಿಂಗ್ ಇದೆಯೋ ಗೊತ್ತಿಲ್ಲ. ತಕ್ಷಣ ಅದು ರಿಲೀಸ್ ಆಗಿ ಹಣ ಬಿಡುಗಡೆಯಾಗುವ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿ): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಅವರು ಹೇಳಿರತಕ್ಕಂಥಾದ್ದು ಏನಿದೆ, ನಾಳೆ ಸಾಯಂಕಾಲದೊಳಗೆ ಇದರ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು: ರೈಟ್. ಮಾನ್ಯ ವಿರೋಧ ಪಕ್ಷದ ನಾಯಕರು.

ಒ) ಹೊಸಕೋಟೆ ತಾಲ್ಲೂಕು ಇಸ್ಸೂರಿನಲ್ಲಿ ನಡೆದ ಅತ್ಯಾಚಾರದ ಬಗ್ಗೆ ಸಿ.ಬಿ.ಐ. ತನಿಖೆ ಬಗ್ಗೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಒಂದು ಪ್ರಮುಖವಾದಂಥ ವಿಷಯವನ್ನು ನಾನು ಸದನದ ಗಮನಕ್ಕೆ ತರಬೇಕು ಎಂದು ಹೇಳಿ ಇವತ್ತು ನಿಂತಿದ್ದೇನೆ. ಸುಮಾರು ಒಂದು ವರ್ಷ ಒಂದು ತಿಂಗಳ ಹಿಂದೆ ಒಂದು ವಿಷಯವನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೆವು. ಇಸ್ಸೂರು ಅತ್ಯಾಚಾರದ ತನಿಖೆಯನ್ನು ಸಿ.ಬಿ.ಐ.ದವರು ನಡೆಸಬೇಕು ಎನ್ನತಕ್ಕಂಥ ಒಂದು ವಿಷಯವನ್ನು ಈ ಸದನದಲ್ಲಿ ಆವತ್ತು ಪ್ರಸ್ತಾಪ ಮಾಡಿ, ಅದು ಸಿ.ಒ.ಡಿ. ಎನ್‌ಕ್ವೈರಿ ಬೇಡ, ಅದನ್ನು ಸಿ.ಬಿ.ಐ. ಎನ್‌ಕ್ವೈರಿ ಆಗಬೇಕು ಎನ್ನತಕ್ಕಂಥ ವಾದವನ್ನು ನಾವು ಇಲ್ಲಿ ಮಂಡಿಸಿದ್ದೇವೆ. ಆವಾಗ ಹೇಳಿದರು 'ಇಲ್ಲ, ಸಿ.ಓ.ಡಿ. ಎನ್‌ಕ್ವೈರಿನೇ ಸರಿ. ಅಲ್ಲಿ ಏನು ಇವತ್ತು ಹೊಸಕೋಟೆ ತಾಲ್ಲೂಕಿನಲ್ಲಿ ಒಂದು ಹತ್ಯಾಕಾಂಡ ನಡೆಯುತ್ತಿದೆ, ಇದರ ಹಿನ್ನಲೆ ಯಾರು? ಅಲ್ಲಿ ಈಗ ಸುಮಾರು ಮೂರು ಖೂನಿಗಳಾಗಿವೆ. ಒಂದು ಜಯಣ್ಣ ಎನ್ನತಕ್ಕಂಥ ಮುದುಕನದ್ದು. ಅದರ ಹಿಂದೆ ವೆಂಕಟೇಶ ಎನ್ನತಕ್ಕಂಥ ತಾಲ್ಲೂಕು ಪಂಚಾಯತ್ ಸದಸ್ಯರು. ಮೊನ್ನೆ ಕರಿಯಣ್ಣ ಎನ್ನತಕ್ಕಂಥವರದ್ದು.

ಅಂದರೆ, ಈ ಕೊಲೆಗಳು ನಡೆಯಬೇಕೆಂದರೆ ಏನು ಇದರಲ್ಲಿ ರಾಜಕೀಯ ಮುಖಂಡರುಗಳ ಕೈವಾಡ ಇದೆಯೋ ಅಥವಾ ಪೋಲೀಸ್ ಅಧಿಕಾರಿಗಳು ಇದಕ್ಕೆ ಕುಮ್ಮಕ್ಕು ಕೊಟ್ಟು ಈ ಕೊಲೆಗಳನ್ನು ಮಾಡಿಸುತ್ತಿದ್ದಾರೋ ಎನ್ನತಕ್ಕ ಪ್ರಶ್ನೆ ಇವತ್ತು ನಮ್ಮ ಮುಂದೆ ಇದೆ. ಹೊಸಕೋಟೆಯಲ್ಲಿ ಅದೂ ವಿಶೇಷವಾಗಿ ಬೆಂಗಳೂರಿಂದ ಬಹಳ ದೂರ ಇರತಕ್ಕಂಥ ಪ್ರದೇಶವೇನೂ ಅಲ್ಲ. ಕೇವಲ 25 ಕಿಲೋಮೀಟರ್ ಮೇಲೆ ಇರತಕ್ಕಂಥ ಈ ಒಂದು ತಾಲ್ಲೂಕಿನಲ್ಲಿ ಪ್ರತಿ ವರ್ಷ 3-4 ಖೂನಿಗಳು ಆಗಬೇಕೆಂದರೆ ಅದಕ್ಕೆ ಕಾರಣ ಏನು? ಯಾರ ಬೆಂಬಲ ಇದೆ? ಮತ್ತು ನಾವು ಇಲ್ಲಿ ರಾಜಕೀಯವಾಗಿ ಪ್ರಸ್ತಾಪ ಮಾಡಿದಾಗ ಅನೇಕಸಾರಿ, ರಾಜಕೀಯ ಮುಖಂಡರ ಯಾರದಾದರೂ ಹೆಸರು ಹೇಳಿದರೆ, ಅವರು ಇದು ನಮಗೆ ಸಂಬಂಧ ಇಲ್ಲ, ಅಂತಾದ್ದು ಇಲ್ಲ ಇಂಥಾದ್ದು ಇಲ್ಲ